**ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕಃ 01-03-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಪಿ.ಆರ್.ಕೆ. ವಕೀಲರಿಂದಃ**

ನನ್ನ ತಂದೆಯ ತಂದೆ(ತಾತನ) ಹೆಸರು ಏನು ಎಂದರೆ ರಾಮಪ್ಪ ಶಿವಮೊಗ್ಗಿ. ರಾಮಪ್ಪನ ತಂದೆ ಹೆಸರು ರಂಗಪ್ಪ ಎಂದರೆ ನನಗೆ ನೆನಪಿಲ್ಲ. ನನ್ನ ಮುತ್ತಾತ ರಂಗಪ್ಪನಿಗೆ ರಂಗಪ್ಪ, ನಾಗಪ್ಪ, ಹನುಮಂತಪ್ಪ 3 ಜನ ಮಕ್ಕಳು ಇದ್ದರು ಎಂದರೆ ಸರಿ. ರಾಮಪ್ಪ ಶಿವಮೊಗ್ಗಿ ರವರಿಗೆ ನನ್ನ ತಂದೆ ಹನುಮಂತಪ್ಪ ಹಾಗೂ ಇನ್ನೊಬ್ಬ ರಂಗಪ್ಪ (1 ನೇ ಪ್ರತಿವಾದಿ) ಇಬ್ಬರು ಆತನ ಮಕ್ಕಳು ಎಂದರೆ ನಿಜ. ನನ್ನ ಮುತ್ತಾತ ರಂಗಪ್ಪನ 2 ನೇ ಮಗ ನಾಗಪ್ಪನಿಗೆ ಗೌರಮ್ಮ ಹೆಂಡತಿ ಹಾಗೂ ಅಂಜನಮ್ಮ ಎಂಬ ಮಗಳು ಇದ್ದರು ಎಂದರೆ ನಿಜ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಸೇರಿಸಿದ್ದೀರಾ ಎಂದರೆ ಸೇರಿಸಿರುತ್ತೇನೆ. ನಾಗಪ್ಪನ ತಮ್ಮ ಹನುಮಂತಪ್ಪನಿಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಮಕ್ಕಳು. ನನ್ನ ಮುತ್ತಾತ ರಂಗಪ್ಪನಿಗೆ ಬೀಮಪ್ಪ ಎಂಬ 4 ನೇ ಮಗ ಇದ್ದ ಎಂದರೆ ಇಲ್ಲ.

2. ನನ್ನ ಮುತ್ತಾತ ರಂಗಪ್ಪನಿಗೆ ಎಷ್ಟು ಆಸ್ತಿಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. ಹನುಮಂತಪ್ಪನ ಮಕ್ಕಳು ಈ ದಾವೆಯಲ್ಲಿ ಸೇರ್ಪಡೆಯಾಗಿದ್ದಾರೆಯೇ ಎಂದರೆ ಇಲ್ಲ. ನಾಗಪ್ಪ ಹಾಗೂ ಹನುಮಂತಪ್ಪ ರವರಿಗೆ ಬಂದಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಇಲ್ಲ. ರಾಮಪ್ಪ, ರಂಗಪ್ಪ, ಹನುಮಂತಪ್ಪ ಹಾಗೂ ನಾಗಪ್ಪನಿಗೆ ಯಾವ ಯಾವ ಆಸ್ತಿಗಳು ಬಂದಿತ್ತು ಎಂದು ಗೊತ್ತಿದೆಯಾ ಎಂದರೆ ಇಲ್ಲ. ರಾಮಪ್ಪ, ರಂಗಪ್ಪ, ಹನುಮಂತಪ್ಪ ಹಾಗೂ ನಾಗಪ್ಪ ರವರ ಹಿಸ್ಸೆಗೆ ಬಂದಿರುವಂತಹ ಆಸ್ತಿಗಳನ್ನು ವಹಿವಾಟು ಮಾಡುತ್ತಿದ್ದರು ಎಂದರೆ ನಿಜ. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಸುಮಾರು 25 ವರ್ಷಗಳ ಹಿಂದೆ ರಾಣೇಬೆನ್ನೂರು ನ್ಯಾಯಾಲಯದಲ್ಲಿ ವ್ಯಾಜ್ಯಗಳು ನಡೆದುಕೊಂಡು ಬಂದಿದೆ ಎಂದರೆ ನಿಜ.

3. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ಪೈಕಿ 2 ಎಕರೆ 29 ಗುಂಟೆ ಪೂರ್ವ ಭಾಗದ್ದು ನಾಗಪ್ಪ ಹಾಗೂ ಆಂಜನವ್ವ ರವರಿಗೆ ವಾಟ್ನಿ ಪತ್ರದ ಪ್ರಕಾರ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ಪೈಕಿ 2 ಎಕರೆ 29 ಗುಂಟೆ ಮದ್ಯ ಭಾಗದ್ದು ತಿಪ್ಪಣ್ಣ ಹನುಮಂತಪ್ಪ ಶಿವಮೊಗ್ಗಿ ಹಾಗೂ ಹನುಮಂತಪ್ಪ ಹನುಮಂತಪ್ಪ ಶಿವಮೊಗ್ಗಿ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ಪೈಕಿ 2 ಎಕರೆ 29 ಗುಂಟೆ ನನ್ನ ದೊಡ್ಡಪ್ಪ ರಂಗಪ್ಪನ ಹೆಸರಿನಲ್ಲಿರುತ್ತದೆ ಎಂದರೆ ನಿಜ. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ರಲ್ಲಿ ಒಟ್ಟು 8 ಎಕರೆ 16 ಗುಂಟೆ ಹೇಗೆ ಬಂತು ಎಂದರೆ

ಸರ್ಕಾರದಿಂದ ಉಚಿತವಾಗಿ ಬಂದಿದೆ. 8 ಎಕರೆ 16 ಗುಂಟೆ ಪೈಕಿ ನನ್ನ ದೊಡಪ್ಪ ರಂಗಪ್ಪ (1 ನೇ ಪ್ರತಿವಾದಿ) 2 ಎಕರೆ 29 ಗುಂಟೆ ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ.

4. ದಾವಾ ಆಸ್ತಿ ಐಟಂ ನಂ.1 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದರೆ ಅದು ಸರ್ಕಾರದ ಜಮೀನು ಆಗಿದ್ದು ನನ್ನ ಅಜ್ಜನ ಕಾಲದಿಂದಲೂ ಬಂದಿರುತ್ತದೆ. ದಾವಾ 2 ನೇ ಆಸ್ತಿ 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದರೆ ಅದು ಸರ್ಕಾರದಿಂದ ಬಂದಿರುತ್ತದೆ. ದಾವಾ ಆಸ್ತಿಗಳ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಇಲ್ಲ. ನನ್ನ ತಂದೆ ಶಿವಮೊಗ್ಗದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದರು ಎಂದರೆ ಸುಮಾರು 35 ವರ್ಷಗಳಿಂದ ವಾಸವಾಗಿದ್ದಾರೆ. ರಾಮಪ್ಪ ನನ್ನ ತಾತನಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದರೆ ನಿಜ. ಅವರು ಇವಾಗಲೂ ಬದುಕಿದ್ದಾರೆ ಎಂದರೆ ನಿಜ. ಹರಪನಹಳ್ಳಿ ರಂಗಮ್ಮ ಎಂಬುವವರು ಇದ್ದಾರೆ ಇನ್ನೊಬ್ಬಳು ಹನುಮಮ್ಮ ಧರ್ಮಸ್ಥಳದಲ್ಲಿ ವಾಸವಾಗಿದ್ದಾಳೆ. ಅವರನ್ನು ಈ ಕೇಸಿನಲ್ಲಿ ಸೇರಿಸಿದ್ದೀರಾ ಎಂದರೆ ಇಲ್ಲ. ನನ್ನ ತಂದೆ ಶಿವಮೊಗ್ಗದಲ್ಲಿ ಸುಮಾರು 60-70 ವರ್ಷಗಳಿಂದ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಶಿವಮೊಗ್ಗದಲ್ಲಿ ಮೃತಪಟ್ಟರು ಎಂದರೆ 1995 ರಲ್ಲಿ ಮೃತಪಟ್ಟಿದ್ದಾರೆ.

5. ನನ್ನ ತಂದೆಗೆ ನಮ್ಮನ್ನು ಬಿಟ್ಟು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಇಬ್ಬರು ಹೆಣ್ಣು ಮಕ್ಕಳು ನನ್ನ ತಂದೆಯ ಕಾಲದಲ್ಲಿ ಶಿವಮೊಗ್ಗದಲ್ಲಿ ದುಡಿದು ಸಂಪಾಧನೆ ಮಾಡಿಕೊಂಡು ಒಂದು ಮನೆ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಶಿವಮೊಗ್ಗದಲ್ಲಿ ನನ್ನ ತಂದೆಗೆ ಆಶ್ರಯ ಯೋಜನೆ ಅಡಿಯಲ್ಲಿ ಸರ್ಕಾರದಿಂದ ಮನೆ ಮಂಜೂರಾಗಿದೆ ಎಂದರೆ ಸರಿ. ಸದರಿ ಮನೆ 1983 ರಲ್ಲಿ ಮಂಜೂರು ಆಗಿದೆ. ನನ್ನ ತಂದೆ ಮನೆ ಮಂಜೂರು ಆಗುವುದಕ್ಕಿಂತ ಪೂರ್ವದಲ್ಲಿ 40 ವರ್ಷಗಳಿಂದ ವಾಸವಾಗಿದ್ದರು ಎಂದರೆ ನನ್ನ ತಂದೆ ಶಿವಮೊಗ್ಗಕ್ಕೆ ಹೋದ ಒಂದು ವರ್ಷಕ್ಕೆ ಮನೆ ಮಂಜೂರು ಆಗಿದೆ. ರಾಮಪ್ಪ ಹಾಗೂ ಆತನ ಹೆಂಡತಿ ಹಾಗೂ ಮಗ ಶಿವಮೊಗ್ಗಕ್ಕೆ ಹೋಗಿ ಅಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ.

6. 1938 ರಲ್ಲಿ ಹನುಮಂತಪ್ಪ ಹಾಗೂ ಆತನ ಹೆಂಡತಿ ಮಗ ರವರಿಗೆ ನೀನು ಶಿವಮೊಗ್ಗದಲ್ಲಿ ವಾಸವಾಗಿರು ಹುಲ್ಲಿ ಕಟ್ಟಿಗೆ ಬರುವುದು ಬೇಡ ಎಂದು ಸೋಡಾ ಚೀಟಿಯನ್ನು ಬಿಡುಗಡೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಅಂದಿನಿಂದ ಹನುಮಂತಪ್ಪ ಹಾಗೂ ರಂಗಪ್ಪನ ನಡುವೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ಮುತ್ತಾತ ರಂಗಪ್ಪನಿಗೆ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ರಂಗಪ್ಪ ಊರಿನ ಹಸುಗಳನ್ನು ಕಾಯುತ್ತಿದ್ದ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಮುತ್ತಾತ ರಂಗಪ್ಪ ಗೊಲ್ಲರ ರಂಗಪ್ಪ ಎಂದು

ಕರೆಯುತ್ತಿದ್ದರು ಎಂದರೆ ಸಾಕ್ಷಿಯೂ ಶಿವಮೊಗ್ಗಿ ರಾಮಪ್ಪ ಗೊಲ್ಲರ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಿಗೂ ಹಾಗೂ ನನ್ನ ತಂದೆ ಹನುಮಂತನಿಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.